# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಕೆ. ಹರೀಶ್ ಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ | : | **916** |
| ಉತ್ತರ ದಿನಾಂಕ | : | 14.07.2023 |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಜಲಜೀವನ್ ಮಿಷನ್' ಗ್ರಾಮೀಣ ಪ್ರದೇಶದ ಮನೆಗಳಿಗೆ ಕೊಳಾಯಿ ಮೂಲಕ ಶುದ್ಧ ಕುಡಿಯುವ ನೀರಿನ ಮಹತ್ವಾಕಾಂಕ್ಷೆಯ ಯೋಜನೆಯಾಗಿದ್ದು, ಸರ್ಕಾರದ ಅನುದಾನ ಹಾಗೂ ಸಮುದಾಯದ ಸಹಭಾಗಿತ್ವದಲ್ಲಿ 3 ಹಂತದಲ್ಲಿ ಯೋಜನೆಯು ಆರಂಭಗೊಂಡಿದ್ದರೂ ನೀರಿನ ಅಭಾವ, ಅನುದಾನ ಕೊರತೆ, ಇಂಜಿನಿಯರ್ ಮತ್ತು ಗುತ್ತಿಗೆದಾರರ ನಿರ್ಲಕ್ಷದಿಂದಾಗಿ ರಾಜ್ಯದ 6,357ಕ್ಕೂ ಹೆಚ್ಚು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಈ ಯೋಜನೆಯು ಇನ್ನೂ ಸಕ್ರಿಯವಾಗಿ ಅನುಷ್ಠಾನಗೊಳ್ಳದೆ, ರಾಜ್ಯದ ಸುಮಾರು 30 ಲಕ್ಷ ಮನೆಗಳಿಗೆ ನೀರಿನ ಪೈಪ್ ಜೋಡನೆಯಾಗಿದ್ದರೂ, ನೀರಿನ ಕೊಳಾಯಿ (ಟ್ಯಾಪ್) ಜೋಡಣೆಯಾಗದಿರಲು ಕಾರಣವೇನು;</td><td>ರಾಜ್ಯದಲ್ಲಿ ಒಟ್ಟು 101.17 ಲಕ್ಷ ಗ್ರಾಮೀಣ ಮನೆಗಳಿದ್ದು ಜಲ್ ಜೀವನ್ ಮಿಷನ್ ಯೋಜನೆಯಡಿ ಎಲ್ಲಾ ಗ್ರಾಮೀಣ ಮನೆಗಳಿಗೆ ಕಾರ್ಯಾತ್ಮಕ ನಳ ಸಂಪರ್ಕ ಮೂಲಕ ಕುಡಿಯುವ ನೀರನ್ನು ಒದಗಿಸಲು ಉದ್ದೇಶಿಸಲಾಗಿರುತ್ತದೆ.<br><br>ರಾಜ್ಯದಲ್ಲಿ 15 ಆಗಸ್ಟ್ 2019ರಂತೆ 24.51 ಲಕ್ಷ ಗ್ರಾಮೀಣ ಮನೆಗಳಿಗೆ ನಳ ಸಂಪರ್ಕವಿದ್ದು, ಇನ್ನುಳಿದ ಮನೆಗಳಿಗೆ ಕಾರ್ಯಾತ್ಮಕ ನಳ ಸಂಪರ್ಕವನ್ನು 4 ಹಂತದಲ್ಲಿ ಒದಗಿಸಲು ಯೋಜಿಸಲಾಗಿರುತ್ತದೆ. ವಿವರ ಕೆಳಕಂಡಂತಿರುತ್ತದೆ.<br><br>
<table>
<tr><th>ಬ್ಯಾಚ್</th><th>ಕಾಮಗಾರಿಗಳ ಸಂಖ್ಯೆ</th><th>ನಳ ಸಂಪರ್ಕ ಒದಗಿಸಲು ಯೋಜಿಸಲಾದ ಮನೆಗಳ ಸಂಖ್ಯೆ</th></tr>
<tr><td>1</td><td>10,355</td><td>23,51,304</td></tr>
<tr><td>2</td><td>6,598</td><td>15,70,604</td></tr>
<tr><td>3</td><td>10,801</td><td>17,71,091</td></tr>
<tr><td>4</td><td>14,805</td><td>15,21,099</td></tr>
<tr><td>ಒಟ್ಟು</td><td>42,559</td><td>72,14,098</td></tr>
</table>
<br>ರಾಜ್ಯದ ಒಟ್ಟು 28,333 ಗ್ರಾಮಗಳ ಪೈಕಿ 7,077 ಗ್ರಾಮಗಳಲ್ಲಿ ಕಾಮಗಾರಿಗಳು ಪೂರ್ಣಗೊಂಡಿದ್ದು, 18,139 ಗ್ರಾಮಗಳಲ್ಲಿ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.</td></tr>
</table>

| | | |
|---|---|---|
| ಆ) | ಈ ಕಾಮಗಾರಿಯು ನಿಧಾನ ಗತಿಯಲ್ಲಿ ಸಾಗುತ್ತಿದ್ದು, ಅದನ್ನು ಶೀಘ್ರವಾಗಿ ಪೂರ್ಣಗೊಳಿಸುವ ನಿಟ್ಟಿನಲ್ಲಿ ಸರ್ಕಾರ ಕ್ರಮವಹಿಸುವುದೇ? (ಮಾಹಿತಿ ನೀಡುವುದು) | ಜಲ್ ಜೀವನ್ ಮಿಷನ್ ಯೋಜನೆಯ ಪ್ರಾರಂಭಿಕ ಹಂತದಲ್ಲಿ ರಾಜ್ಯದಲ್ಲಿ 2019-20 ಹಾಗೂ 2020-21ನೇ ಸಾಲಿನಲ್ಲಿ ಕೋವಿಡ್-19ರ ಮೊದಲನೇ ಅಲೆ ಹಾಗೂ ಎರಡನೇ ಅಲೆಯಿಂದಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ವಿಳಂಬವಾಗಿರುತ್ತದೆ. ಅಲ್ಲದೇ ಅಂತರ್ಜಲ ಕುಂಠಿತಗೊಂಡಿರುವ ಪ್ರದೇಶಗಳಲ್ಲಿ ಸುಸ್ಥಿರ ಜಲಮೂಲವನ್ನು ಗುರುತಿಸುವಲ್ಲಿ ಜಲ ಜೀವನ್ ಮಿಷನ್ ಯೋಜನೆಯ ಅನುಷ್ಠಾನವು ವಿಳಂಬವಾಗಿರುತ್ತದೆ.<br><br>ಈ ವಿಳಂಬವನ್ನು ಸರಿದೂಗಿಸಲು ಸಮರೋಪಾದಿಯಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಂಡು ನಿಗಧಿತ ಅವಧಿಯೊಳಗೆ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ. |

ಕಡತ ಸಂ:ಗ್ರಾಕುನೀ&ನೈ ಇ/38/ಅಧೀಕ್ಷಕರು-01/2023

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು